

ಟಿ.ಎಸ್. ನಾಗರಾಜ ಶೆಟ್ಟಿ
ಕಲೆ: ಸಂತೋಷ್ ಸಸಿಹಿತ್ಲು



# ಪೂರ್ವಿಯ ಬೇಡಿಕೆ

ಜ್ವರವೇ ಜ್ವರವೇ ಹೋಗು
ನಾ ಐಸ್‌ಕ್ರೀಂ ತಿನ್ನಬೇಕು
ಕೆಮ್ಮೇ ಕೆಮ್ಮೇ ಹೋಗು
ನಾ ಚಾಕೊಲೇಟ್ ಮೆಲ್ಲಬೇಕು
ನೆಗಡಿ ನೆಗಡಿ ಹೋಗು
ನಾ ಗಿಣ್ಣ ಮುಕ್ಕಬೇಕು

ಜ್ವರವೇ ಜ್ವರವೇ ಹೋಗು
ಚುಚ್ಚಿ ನಂಗೆ ಬೇಡ
ಕೆಮ್ಮೇ ಕೆಮ್ಮೇ ಹೋಗು
ಸಿರಪ್ ಕೊಡಬೇಡ
ನೆಗಡಿ ನೆಗಡಿ ಹೋಗು
ಮಾತ್ರೆ ಮೊದಲೇ ಬೇಡ!

ಜ್ವರವೇ ಜ್ವರವೇ ಹೋದ್ರೆ
ಭೇಷ್ ಭೇಷ್ ಅಂತೀನಿ ನಿಂಗೆ
ಕೆಮ್ಮೇ ಕೆಮ್ಮೇ ಹೋದ್ರೆ
ಜಾಣ ಅಂತೀನಿ ನಿನ್ನ
ನೆಗಡಿ ನೆಗಡಿ ಹೋದ್ರೆ
ಕ್ಯೂಟ್ ಕ್ಯೂಟ್ ಅಂತೀನಿ ನಿನ್ನ!